ಪೂರಕ ಟಿಪ್ಪಣಿ:

ಶಿವಮೊಗ್ಗ ಜಿಲ್ಲೆ, ಹೊನ್ನಾಳಿ ತಾಲ್ಲೂಕು, ಚೀಲೂರಿನಲ್ಲಿ ಭಾರತೀಯ ವೈದ್ಯ ಪದ್ಧತಿಗಳು ಮತ್ತು ಹೋಮಿಯೋಪಥಿ ಇಲಾಖೆಗೆ ಸಂಬಂಧಪಟ್ಟ ಯಾವುದೇ ಆಯುರ್ವೇದ ಆಸ್ಪತ್ರೆ ಇರುವುದಿಲ್ಲ. ಈಗ ಚೀಲೂರಿನಲ್ಲಿ ಹಾಲಿ ಇರುವ ಹೆಚ್. ಯು. ಟಿ. ಡಿ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಗೆ ಸಂಬಂಧಪಟ್ಟಿದೆ. ಆದುದರಿಂದ ಪ್ರಸಕ್ತ ವರ್ಷದಿಂದ ಮೇಲ್ಕಂಡ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಅರಕಲ ಗೂಡು ತಾಲ್ಲೂಕಿನಲ್ಲಿ ಸಾರಾಯಿ ಅಂಗಡಿಗಳು

೬೪೨. ಶ್ರೀ ಕೆ. ಬಿ. ಮಲ್ಲಪ್ಪ (ಅರಕಲಗೂಡು).— ಮಾನ್ಯ ಆರೋಗ್ಯ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅರಕಲಗೂಡು ತಾಲ್ಲೂಕಿನಲ್ಲಿ ಇರುವ ಸಾರಾಯಿ ಅಂಗಡಿಗಳ ಸಂಖ್ಯೆ ಎಷ್ಟು ?

ಆ) ಪರವಾನಿಗೆಗಳನ್ನು ಪಡೆಯದೆ ಅರಕಲಗೂಡು ತಾಲ್ಲೂಕಿನಲ್ಲಿ ತೆರೆದಿರುವ ಸಾರಾಯಿ ಅಂಗಡಿಗಳ ಸಂಖ್ಯೆ ಎಷ್ಟು ?

ಇ) ಮೇಲ್ಕಾಣಿಸಿದ ತಾಲ್ಲೂಕಿನಲ್ಲಿ ಅನಧಿಕೃತ ಅಂಗಡಿಗಳು ನಡೆಯುತ್ತಿರುವ ಬಗ್ಗೆ ಗುತ್ತಿಗೆ ದಾರರ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬಕಾರಿ ಸಚಿವರು).—

ಅ) ೩೪

ಆ) ಅಂತಹ ಪ್ರಕರಣಗಳು ಯಾವುವು ಇಲ್ಲ.

ಇ) ಪ್ರಶ್ನೆ ಅ)ಗೆ ಕೊಟ್ಟ ಉತ್ತರದ ಪ್ರಕಾರ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.— ಯಾರಾದರೂ ಮಂಡಿಸಿ.

ಶ್ರೀ ಆರ್. ವೆಂಕಟರಾವಪ್ಪ.— ಅಧ್ಯಕ್ಷರೇ, ನಾನು ಅಬ್ಸೆಂಟ್ ಆಗಿದ್ದೆ.

ಅಧ್ಯಕ್ಷರು.— ತಡೆಯಿರಿ.

ಶ್ರೀ ಆರ್. ವೆಂಕಟರಾಮಯ್ಯ. — ನಾನು ಅಬ್ಸೆಂಟ್ ಆಗಿದ್ದೆ. ದಯವಿಟ್ಟು ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು.— ತಾವು ಕುಳಿತುಕೊಳ್ಳಿ.

ಶ್ರೀ ಬಿ. ರಾಚಯ್ಯ.— ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಇಡುತ್ತೇನೆ.

ರಾಜ್ಯದಲ್ಲಿ ಕುಟುಂಬಕ್ಕೆ ಒಬ್ಬರಂತೆ ಉದ್ಯೋಗವನ್ನು ನೀಡುವ ಬಗ್ಗೆ

೩೨೫. ಶ್ರೀ ಕೆ. ಹೆಚ್. ಪಾಟೀಲ್ (ಗದಗ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಟುಂಬಕ್ಕೊಂದರಂತೆ ಉದ್ಯೋಗವನ್ನು ಕೊಡುವ ಸರಕಾರದವರ ಯೋಜನೆಯಂತೆ ಇದುವರೆಗೂ ಕೊಟ್ಟಿರುವ ಉದ್ಯೋಗಗಳೆಷ್ಟು ಹಾಗೂ ರಾಜ್ಯದಲ್ಲಿ ಇದುವರೆವಿಗೂ ಗುರುತಿಸಿರುವ ಒಟ್ಟು ಅಂತಹ ಕುಟುಂಬಗಳೆಷ್ಟು ?